# ಹೊಸ ದಿಕ್ಕಿಗೆ ಹರಿಯಲಿರುವ ಗಂಗಾ

ZEE ಕನ್ನಡ

ಜೀ ಕನ್ನಡ ವಾಹಿನಿ ಸದಾ ನವನವೀನ ಕಾರ್ಯಕ್ರಮಗಳನ್ನು ರೂಪಿಸಿ, ಕನ್ನಡಿಗರ ಜನಮನ ಗೆದ್ದಿದೆ. ವೀಕ್ಷಕರಿಗೆ ಮನರಂಜನೆಯ ರಸದೌತಣವನ್ನು ಒದಗಿಸುತ್ತಲೇ, ಮೌಲ್ಯಯುತ ಕಾರ್ಯಕ್ರಮಗಳೊಂದಿಗೆ ಎಲ್ಲರ ಮನೆ ಮಾತಾಗಿ ಕರ್ನಾಟಕದ ನಂಬರ್ 1 ವಾಹಿನಿಯಾಗುವತ್ತ ದಾಪುಗಾಲಿಡುತ್ತಿದೆ. ನಾನ್ ಫಿಕ್ಷನ್ ವಿಭಾಗದಲ್ಲಿ ಸರಿಗಮಪ ಸೀಸನ್ 13, ಕಾಮಿಡಿ ಕಿಲಾಡಿಗಳು, ಡ್ರಾಮಾ ಜ್ಯೂನಿಯರ್ಸ್ ಹಾಗೂ ಫಿಕ್ಷನ್ ವಿಭಾಗದಲ್ಲಿ ನಾಗಿಣಿ, ಮಹಾದೇವಿ,ಜೋಡಿಹಕ್ಕಿ ಯಾರೇ ನೀ ಮೋಹಿನಿಯಂಥ ಕಾರ್ಯಕ್ರಮಗಳನ್ನು ನೀಡಿ ಅಭೂತಪೂರ್ವ ಯಶಸ್ಸು ಸಾಧಿಸಿದೆ. ಇದೀಗ ಜನಮೆಚ್ಚಿದ ಧಾರಾವಾಹಿ ಗಂಗಾದಲ್ಲಿ ಹೊಸ ಪರ್ವ ಆರಂಭವಾಗುತ್ತಿದೆ.

ಕಥೆಯ ನಾಯಕ ಸಾಗರ್‌ನನ್ನು ಬದುಕಿಸಲಿಕ್ಕಾಗಿ ಕಥೆಯ ನಾಯಕಿ ಪುಟ್ಟ ಗಂಗಾ ಸಾಗರ್ ಕೈಯಿಂದ ಅರಿವಿಲ್ಲದಂತೆ ತಾಳಿ ಕಟ್ಟಿಸಿಕೊಂಡಿರುತ್ತಾಳೆ. ತನ್ನ ಮಗ ಸಾಗರ್ ಗಂಗಾಳ ಜೊತೆ ಬೆರತು ಹೋಗಬಹುದೆಂಬ ಭಯದಿಂದ ಸಾಗರ್ ತಾಯಿ ನಂದಿನಿ ಗಂಗಾಳನ್ನು ಸಾಗರ್‌ನಿಂದ ದೂರ ಇಡುವ ಪ್ರಯತ್ನ ಮಾಡಿರುತ್ತಾಳೆ. ಚಿಕ್ಕ ಬಾಲಕಿಯಾಗಿದ್ದ ಗಂಗಾ ಈಗ ಬೆಳೆದು ನಿಂತಿದ್ದಾಳೆ. ಸಾಗರ್ ಜೊತೆಗೆ ಆಗಿದ್ದ ಸ್ನೇಹವೀಗ ಅವಳಲ್ಲಿ ಪ್ರೀತಿಯಾಗಿ ಚಿಗುರೊಡೆದಿದೆ. ಆದರೆ ಸಾಗರ್‌ಗೆ ಗಂಗಾಳ ಬಗ್ಗೆ ಇನ್ನೂ ಅದೇ ಅಭಿಮಾನವಿದೆಯಾ? ರಾಧಕ್ಕ ತನ್ನ ರಾಜಕುಮಾರನಾದ ಸಾಗರ್‌ಗಾಗಿ ಬಚ್ಚಿಟ್ಟುಕೊಂಡ ಸತ್ಯಗಳನ್ನು ತನ್ನೊಳಗೆ ಸಾಯಿಸುತ್ತಾಳಾ? ಸಾಗರ್ ಆಯ್ಕೆ ತಾಯಿಯ ವಾತ್ಸಲ್ಯವೊ, ಗಂಗಾಳ ಪ್ರೀತಿಯೋ ಇತ್ಯಾದಿ ಪ್ರಶ್ನೆಗಳಿಗೆ ಮುಂದಿನ ದಿನಗಳಲ್ಲಿ ಉತ್ತರ ಸಿಗಲಿದೆ. ಈ ವಾರದಿಂದಲೇ ಗಂಗಾಳ ಬದುಕಿನ ಹೊಸ ಅಧ್ಯಾಯ ಆರಂಭವಾಗಲಿದೆ.



ಗೃಹಲಕ್ಷ್ಮಿ, ಸುಬ್ಬಲಕ್ಷ್ಮಿಸಂಸಾರದಂತಹ ಯಶಸ್ವಿ ಧಾರಾವಾಹಿಗಳನ್ನ ನಿರ್ಮಿಸಿ ನಿರ್ದೇಶಿಸಿರುವ ಸ್ವಪ್ನಕೃಷ್ಣ ಈ ಧಾರಾವಾಹಿಯ ನಿರ್ಮಾಣ ಮತ್ತು ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಆರ್‌ಆರ್‌ಆರ್ ಕ್ರಿಯೇಷನ್ಸ್ ಕ್ರಿಯೇಟಿವ್ ಹೆಡ್ ಆಗಿರುವ ಹೆಬ್ಬುಲಿ ಕೃಷ್ಣರವರು ಹೊಸ ರೀತಿಯ ಮೇಕಿಂಗ್‌ನೊಂದಿಗೆ ಗಂಗಾಳಿಗೆ ಹೊಸ ಮೆರಗು ನೀಡುತ್ತಿದ್ದಾರೆ.

**ಗಂಗಾದ ಹೊಸ ಪರ್ವ**

ಇದೇ ನವೆಂಬರ್ **13** ರಿಂದ ಸೋಮ-ಶುಕ್ರ ರಾತ್ರಿ **9.30**ಕ್ಕೆ ನಿಮ್ಮ ನೆಚ್ಚಿನ ಜೀ ಕನ್ನಡ ವಾಹಿನಿಯಲ್ಲಿ ಪ್ರಸಾರವಾಗಲಿದೆ.

ಗಂಗಾ

